# ವಿವಾದದ ಸುಳಿಯಲ್ಲಿ...

■ ಆಲೇಖ

ಲತಾ ಮಂಗೇಶ್ಕರ್ ಮತ್ತೆ ಸುದ್ದಿಯಲ್ಲಿದ್ದಾರೆ. ಸೆಪ್ಟೆಂಬರ್ 28ರಂದು 83ನೇ ಹುಟ್ಟುಹಬ್ಬವನ್ನು ಆಚರಿಸಿದ ಅವರು ಸುದ್ದಿಯಲ್ಲಿರುವುದು ಸಹಜವೇ. ಆದರೆ ಈ ಸಲದ ಸುದ್ದಿ ಸ್ವಲ್ಪ ವಿಭಿನ್ನ, ವಿವಾದಾತ್ಮಕ. ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಪತ್ರಿಕೆಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಲತಾ ದೀದಿ, "ಗಾಯಕಿಯರಿಗೆ ರಾಯಲ್ಟಿ ನೀಡುವ ವಿಷಯಕ್ಕೆ ಸಂಬಂಧಿಸಿ ಮೊಹಮ್ಮದ್ ರಫಿ ಅವರ ಜತೆಗೆ ನನಗೆ ಜಗಳವಾಯಿತು. ಆಗ ಅವರು ಎಲ್ಲ ಸಂಗೀತಗಾರರಿದ್ದ ಸಭೆಯಲ್ಲಿ 'ಲತಾ ಜತೆಗೆ ಇನ್ನು ಮುಂದೆ ನಾನು ಡ್ಯುಯಟ್ ಹಾಡುವುದಿಲ್ಲ' ಎಂದರು. ನನಗೂ ಸಿಟ್ಟು ಬಂತು. 'ರಫಿ ಸಾಬ್, ನೀವು ಹಾಡುವುದಲ್ಲ; ನಾನೇ ನಿಮ್ಮ ಜತೆಗೆ ಹಾಡುವುದಿಲ್ಲ' ಎಂದು ಸ್ಟುಡಿಯೋದಿಂದ ಹೊರನಡೆದೆ. ಅದನ್ನು ಎಲ್ಲ ಸಂಗೀತ ನಿರ್ದೇಶಕರಿಗೂ ತಿಳಿಸಿದೆ. ಐದಾರು ವರ್ಷಗಳ ಬಳಿಕ ಸಂಗೀತ ನಿರ್ದೇಶಕ ಜೈಕಿಶನ್ ಅವರು ನಮ್ಮಿಬ್ಬರ ನಡುವೆ ರಾಜಿ ಮಾಡಿಸಿದರು. ಆಗಲೂ ರಫಿಯವರಿಂದ ಲಿಖಿತ ಕ್ಷಮಾಪಣೆ ಪಡೆದ ಬಳಿಕವೇ ನಾನು ಅವರ ಜತೆ ಹಾಡಲು ಒಪ್ಪಿದ್ದು. ಆ ಬಳಿಕ ನಾವು ಜತೆಗೂಡಿ ಡುಯೆಟ್ ಹಾಡಿದರೂ ಅವರನ್ನು ನೋಡಿದಾಗಲೆಲ್ಲ ನನಗೆ ಹಳೆಯ ಘಟನೆ ನೆನಪಾಗುತ್ತಿತ್ತು.." ಎಂದು ಹೇಳಿರುವುದು ಈಗಿನ ವಿವಾದಕ್ಕೆ ಕಾರಣ.

ವಯಸ್ಸಿನಲ್ಲಿ ಲತಾ ಮಂಗೇಶ್ಕರ್‌ಗಿಂತ ಮೊಹಮ್ಮದ್ ರಫಿ ಐದು ವರ್ಷ ದೊಡ್ಡವರು. ಜನಪ್ರಿಯತೆಯಲ್ಲೂ ಬಹುಶಃ ರಫಿಯೇ ದೊಡ್ಡವರು. ಲತಾ ಅವರಂತೆಯೇ ರಫಿ ಅವರಿಗೂ ಕೋಟ್ಯಂತರ ಅಭಿಮಾನಿಗಳಿದ್ದಾರೆ. ದೇಶ ವಿದೇಶಗಳಲ್ಲಿ 'ಏಕ್ ಶಾಮ್, ರಫೀ ಕೆ ನಾಮ್' ಸಂಗೀತ ಸಂಜೆಗಳು ಇವತ್ತಿಗೂ ಭರ್ಜರಿಯಾಗಿ ನಡೆಯುತ್ತವೆ. ಅದಕ್ಕಿಂತ ಮುಖ್ಯವಾಗಿ ಮೊಹಮ್ಮದ್ ರಫಿ ತೀರಿಕೊಂಡು 25 ವರ್ಷಗಳೇ ಕಳೆದಿವೆ. ಈತ ಲತಾ ದೀದಿ ಇಂತಹದ್ದೊಂದು ವಿವಾದಾತ್ಮಕ ಹೇಳಿಕೆ ನೀಡುವ ಅಗತ್ಯವಿತ್ತೆ?

ರಫಿಯವರ ಮಗ ಮೊಹಮ್ಮದ್ ಶಾಹಿದ್ ಕೂಡಾ ಇದೇ ಪ್ರಶ್ನೆಯನ್ನು ಎತ್ತಿದ್ದಾರೆ. "ಲತಾ ಮಂಗೇಶ್ಕರ್‌ರಿಗೆ ಪ್ರಚಾರದ ಗೀಳು ಅಂಟಿಕೊಂಡಿದೆ. ಅದಕ್ಕೆಂದೇ ಸುಳ್ಳು ಹೇಳಿಕೆ ನೀಡಿದ್ದಾರೆ. ಇಷ್ಟು ವರ್ಷಗಳ ಬಳಿಕ, ಜೈಕಿಶನ್‌ಜೀ ಮತ್ತು ರಫಿ ಸಾಬ್ ಇಬ್ಬರೂ ಇಲ್ಲದಿರುವ ಸಂದರ್ಭದಲ್ಲಿ ಹೀಗೆ ಹೇಳುವುದು ಎಷ್ಟು ಸರಿ? ನಮ್ಮ ತಂದೆಯವರು ಲಿಖಿತ ಕ್ಷಮೆ ಕೇಳಿದ್ದೇ ಆಗಿದಲ್ಲಿ ಅದರ ಪ್ರತಿ ಇರಬೇಕಲ್ಲ..? ಅದನ್ನು ಬಹಿರಂಗ ಪಡಿಸಲಿ. ಹಾಗೆ ಮಾಡಿದರೆ ನಾನೇ ಕ್ಷಮೆ ಕೇಳುತ್ತೇನೆ" ಎಂದಿದ್ದಾರೆ ಶಹೀದ್.

'ಲತಾ ದೀದಿ ಸುಳ್ಳು ಹೇಳಲಿಕ್ಕಿಲ್ಲ' ಎನ್ನುವುದು ಅವರ ಅಭಿಮಾನಿಗಳ ಅನಿಸಿಕೆ. 'ಈ ವಿವಾದ ಅನಗತ್ಯ. ಇದು ಚರ್ಚೆ ಮಾಡುವಂತಹದ್ದೇ ಅಲ್ಲ' ಎನ್ನುವುದು ಇಬ್ಬರಿಗೂ ಅಭಿಮಾನಿಗಳಾಗಿರುವವರ ಅಂಬೋಣ.

ಹಾಗೆ ನೋಡಿದರೆ ವಿವಾದಗಳು ಲತಾ ಅವರಿಗೆ ಹೊಸತಲ್ಲ. ಹಿರಿಯ ಸಂಗೀತ ನಿರ್ದೇಶಕ ಎಸ್.ಡಿ. ಬರ್ಮನ್ ಅವರೊಮ್ಮೆ ಪತ್ರಿಕೆಯೊಂದರಲ್ಲಿ 'ಲತಾರ ವೃತ್ತಿಜೀವನವನ್ನು ಸೃಷ್ಟಿಸಿದ್ದು ಯಾರು? ನಾವೇ ಮಾಡಿದ್ದು. ನಾವು ಆಕೆಗೆ ಹಾಡುಗಳನ್ನು ನೀಡಿದ್ದು' ಎಂದಿದ್ದರು. ಅದೇ ನೆಪ ಮಾಡಿಕೊಂಡು ಮೂರು ವರ್ಷಗಳ ಕಾಲ ಎಸ್.ಡಿ.ಬರ್ಮನ್ ಜತೆಗೆ ಲತಾ ಮಾತು ಬಿಟ್ಟಿದ್ದರು. ಕೊನೆಗೆ ಎಸ್.ಡಿ. ಬರ್ಮನ್‌ರ ಮಗ ಆರ್.ಡಿ.ಬರ್ಮನ್ ಮಧ್ಯಸ್ಥಿಕೆ ಮಾಡಿದರು. ಸ್ಟುಡಿಯೋಗೆ ಬಂದ ಲತಾ ಅವರಿಗೆ ಎಸ್.ಡಿ ಯವರು ಬಾರಮ್ಮಾ, ನಿನಗೊಂದು ಹಾಡಿದೆ.. ಎಂದ ಮೇಲೆಯೇ ಲತಾ ಸಿಟ್ಟು ಕಡಿಮೆಯಾಯಿತಂತೆ.

ಲತಾ ಅವರ ಸ್ವರವನ್ನೇ ಹೋಲುವ ಗಾಯಕಿ ಸುಮನ್ ಕಲ್ಯಾಣ್‌ಪುರ್ ಜತೆಗೂ ಲತಾ ದೀದಿಗೆ ವೈಮನಸ್ಯವಿತ್ತು. 'ಸುಮನ್ ಮತ್ತಿತರ ಗಾಯಕಿಯರಿಗೆ ಅವಕಾಶವೇ ಸಿಗದಂತೆ ಲತಾ ನೋಡಿಕೊಂಡರು' ಎನ್ನುವವರಿದ್ದಾರೆ. 90ರ ದಶಕದಲ್ಲಿ ಗಾಯಕಿ ಅನುರಾಧಾ ಪೊಡ್ವಾಳ್ ಕೂಡಾ ಇದೇ ಮಾತನ್ನು ಹೇಳಿದ್ದುಂಟು.

1974–91ರ ಅವಧಿಯಲ್ಲಿ ಅತ್ಯಧಿಕ ಹಾಡುಗಳನ್ನು ಹಾಡಿದರೆಂಬ ಹಿನ್ನೆಲೆಯಲ್ಲಿ ಲತಾ ಅವರ ಹೆಸರನ್ನು ಗಿನ್ನೆಸ್ ವಿಶ್ವದಾಖಲೆ ಪಟ್ಟಿಗೆ ಸೇರಿಸುವ ಪ್ರಯತ್ನ ನಡೆಯಿತು. ಈ ಅವಧಿಯಲ್ಲಿ ಅವರು 20 ಭಾಷೆಗಳಲ್ಲಿ 25 ಸಾವಿರಕ್ಕೂ ಹೆಚ್ಚು ಹಾಡುಗಳನ್ನು ಹಾಡಿದ್ದಾರೆ ಎನ್ನುವ ಅಂಕಿ ಅಂಶದ ಬಗ್ಗೆಯೇ ಹಲವರು ತಕರಾರು ಎತ್ತಿದ್ದರು. ಕೊನೆಗೂ 2011ರಲ್ಲಿ ಅವರ ಹೆಸರು ಗಿನ್ನೆಸ್ ದಾಖಲೆಗೆ ಸೇರಿತು.

ವಿವಾದಗಳು ಏನೇ ಇರಲಿ; ಇವತ್ತಿಗೂ ಲತಾ ದೀದಿಯ ಹಾಡುಗಳ ಮಾಧುರ್ಯಕ್ಕೆ ಸಾಟಿಯಿಲ್ಲ. ಐದರ ಹರೆಯದಲ್ಲಿ ನಟಿಯಾದ, 13ರ ಹರೆಯದಲ್ಲಿ ತಂದೆಯನ್ನು ಕಳೆದುಕೊಂಡು ತಂಗಿಯರನ್ನು ಸಾಕಿದ ಮತ್ತು ಅದಕ್ಕಾಗಿ ಮದುವೆಯನ್ನೇ ನಿರಾಕರಿಸಿದ ಭಾರತ ರತ್ನ, ಪದ್ಮವಿಭೂಷಣ ಪ್ರಶಸ್ತಿಗಳನ್ನು ಅರ್ಹವಾಗಿಯೇ ಪಡೆದುಕೊಂಡ ಲತಾ ದೀದಿಯ ಸ್ವರಮಾಧುರ್ಯ ಅನುಪಮ. ಈಗಿನ ಬಾಲಿವುಡ್ ನಿರ್ದೇಶಕರಿಗೆ ಅವರ ಹಾಡುಗಳು ಬೇಡವಿರಬಹುದು; ಆದರೆ ಅವರ ಹಳೆಯ ಹಾಡುಗಳಿಗಂತೂ ಖಂಡಿತಾ ಸಾವಿಲ್ಲ. ●

